ಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ಕರ್ನಾಟಕ ರಾಜ್ಯದ ಎಲ್ಲಾ ಹತ್ತಿ ಗಿರಣಿ ಕಾರ್ಮಿಕರ ವೇತನ ಕೆಲವು ದಿನಗಳ ಹಿಂದಿಯೇ ಹೆಚ್ಚಳವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಎಷ್ಟು ಹೆಚ್ಚಳವಾಗಿದೆ ;

ಇ) ಈ ಹೆಚ್ಚಳವಾದ ವೇತನವನ್ನು ರಾಜ್ಯದ ರಾಷ್ಟ್ರೀಕೃತ ಗಿರಣಿಗಳ ಮತ್ತು ಸಹಕಾರಿ ಕ್ಷೇತ್ರದ ಗಿರಣಿಗಳ ಕಾರ್ಮಿಕರಿಗೆ ಕೊಡಲು ನಿರಾಕರಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಸರ್ಕಾರದವರು ಈ ಬಗ್ಗೆ ಯಾವ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ?

ಉತ್ತರ.—ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮಂತ್ರಿಗಳು).—

ಅ) ಬಂದಿದೆ. 14-7-1983 ರಂದು ಕಾರ್ಮಿಕ ಕಮಿಷನರ್‌ರವರ ಮುಂದೆ ಈ ಬಗ್ಗೆ ಒಂದು ಒಪ್ಪಂದವಾಗಿದೆ,

ಆ) 1-7-1983 ರಿಂದ ತಿಂಗಳಿಗೆ 26 ರೂ.ನಂತೆ ಎಲ್ಲಾ ಕೆಲಸಗಾರರಿಗೂ ಸಂಬಳದಲ್ಲಿ ಹೆಚ್ಚಳವನ್ನು ಒಪ್ಪಲಾಗಿದೆ 1-7-1983 ರಂದು ಮಿಲ್ಲುಗಳಲ್ಲಿ ಕೆಲಸದ ಮೇಲೆ ಇರುವ ಎಲ್ಲಾ ಕೆಲಸಗಾರರಿಗೂ 100 ರೂ.ನಂತೆ ಒಂದು ಮೊತ್ತದ ಹಣವನ್ನು ಕೊಡಲು ಒಪ್ಪಲಾಗಿದೆ.

ಇ) ಬಂದಿದೆ. 14-7-1983 ರ ಒಪ್ಪಂದಕ್ಕೆ ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಮತ್ತು ಸಹಕಾರಿ ಕ್ಷೇತ್ರದ ಗಿರಣಿಗಳ ಮಾಲೀಕರೂ ಸಹಿ ಹಾಕಿಲ್ಲ.

ಈ) ರಾಜ್ಯದ ರಾಷ್ಟ್ರೀಕೃತ ಗಿರಣಿಗಳು ಮತ್ತು ಸಹಕಾರೀ ಕ್ಷೇತ್ರದ ಗಿರಣಿಗಳ ಕಾರ್ಮಿಕರಿಗೆ 14-7-1983 ರಿಂದ ಒಪ್ಪಂದದಂತೆ ವೇತನದ ಹೆಚ್ಚಳವು ದೊರಕಲು ಸರ್ಕಾರವು ಆ ಕ್ಷೇತ್ರದ ಗಿರಣಿಗಳ ಆಡಳಿತ ವರ್ಗದವರ ಮನ ಒಲಿಸುವ ಪ್ರಯತ್ನ ಮಾಡುತ್ತಿದೆ.

ವಿಷಯ :—ಪಂಚಾಯಿತಿಗಳಿಗೆ ಹಾಜರಾಗದ ಕಾರ್ಖಾನೆಗಳ ಮಾಲೀಕರು

ಪ್ರಶ್ನೆ 3(43) ಶ್ರೀ ಸೂರ್ಯನಾರಾಯಣ ರಾವ್ (ವರ್ತೂರು).—ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಬೆಂಗಳೂರು ನಗರದಲ್ಲಿ ಎಷ್ಟು ಕಾರ್ಖಾನೆಗಳ ಮಾಲೀಕರು ಪಂಚಾಯಿತಿಗೆ ಹಾಜರಾಗುತ್ತಿಲ್ಲ;

ಆ) ಈ ಕೈಗಾರಿಕಾ ಕಾರ್ಖಾನೆಗಳ ಮಾಲೀಕರುಗಳಲ್ಲಿ ಎಷ್ಟು ಜನ ಸಿ. ಐ. ಟಿ. ಯು. ಜೊತೆಯಲ್ಲಿ ಮಾತುಕತೆ ನಡೆಸಲು ನಿರಾಕರಿಸುತ್ತಿದ್ದಾರೆ ;

ಇ) ಅಂತಹ ಮಾಲೀಕರುಗಳ ಮೇಲೆ ಪಂಚಾಯಿತಿಗಳಿಗೆ ಹಾಜರಾಗದ ಸಿ. ಐ. ಟಿ. ಯು. ಜೊತೆಯಲ್ಲಿ ಮಾತುಕತೆಗೆ ನಿರಾಕರಿಸುವ ಮಾಲೀಕರ ಮೇಲೆ ಒತ್ತಾಯ ತರಲು ಸರ್ಕಾರದವರು ಯಾವ ಕಾರ್ಯಕ್ರಮ ಕೈಗೊಂಡಿದ್ದಾರೆ ?

ಉತ್ತರ.—ಅಜೀಜ್ ಸೇಟ್ (ಕಾರ್ಮಿಕ ಮಂತ್ರಿಗಳು).—ಅ) ಒಂದು ಆಂಧ್ರ ಸ್ಟೀಲ್ ಕಾರ್ಪೊರೇಷನ್, ಬೆಂಗಳೂರು.

ಆ) ಮೂರು – 1) ಆಂಧ್ರ ಸ್ಟೀಲ್ ಕಾರ್ಪೊರೇಷನ್
2) ಮೈಕೋ
3) ಐ. ಟಿ. ಐ.

ಇ) ಹಾಲಿ ಇರುವ ಕಾನೂನಿನಂತೆ ಸಾಧ್ಯವಿಲ್ಲ.

ವಿಷಯ :—ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ವಜಾ ಮಾಡಿರುವ ಬಗ್ಗೆ

ಪ್ರಶ್ನೆ 4(50) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 302 ಜನ ಕೆಲಸಗಾರರನ್ನು ಆಡಳಿತವರ್ಗದವರು ಕೆಲಸದಿಂದ ವಜಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇವರೆಲ್ಲರನ್ನೂ ಕೆಲಸಕ್ಕೆ ಪಾಪಸ್ಸು ತೆಗೆದುಕೊಳ್ಳಬೇಕೆಂದು ಕೈಗಾರಿಕಾ ನ್ಯಾಯಾಲಯ ತೀರ್ಪಿತ್ತಿರುವುದು ನಿಜವೇ ;

ಇ) ಈ ತೀರ್ಪನ್ನು ಜಾರಿಗೊಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಕಾರ್ಖಾನೆಯಿಂದ ವಜಾ ಆದವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಾಗಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಉತ್ತರ.—ಶ್ರೀ ಅಜೀಜ್ ಸೇಟ್ (ಕಾರ್ಮಿಕ ಮಂತ್ರಿಗಳು).—ಅ) ಬಂದಿದೆ.

ಆ) ಹೌದು. ಇ) ಬಂದಿದೆ.

ಈ) ಈ ಬಗ್ಗೆ ಕಾರಣ ಕೇಳಿ ಒಂದು ನೋಟೀಸು ತಾ॥ 26-7-1983 ರಲ್ಲಿ ಕೊಟ್ಟಿದೆ.